# ಕನ್ನಡ ರಂಗಭೂಮಿ – ಪರಂಪರೆ ಮತ್ತು ಪ್ರಸ್ತುತ ಸ್ಥಿತಿ

**ಶಿವಾನಂದ ಎಂ. ಹಂಚಿನಾಳ***

DOI: https://doi.org/10.5281/zenodo.22106825

**ABSTRACT**

ಜಗತ್ತಿನ ಅತ್ಯಂತ ಪ್ರಾಚೀನ ಕಲೆಗಳಲ್ಲಿ ರಂಗ ಪರಂಪರೆ ಪ್ರಮುಖವಾದುದು. ಎಲ್ಲಾ ದೇಶಗಳಲ್ಲಿ ನಾಟಕ ಹುಟ್ಟಿದ್ದು ದೇವತೆಗಳ ಆನಂದಕ್ಕಾಗಿ ಅಥವಾ ಭೂತ ಬೇತಾಳಗಳನ್ನು ತೃಪ್ತಿಪಡಿಸುವುದಕ್ಕಾಗಿ ನಡೆಯುವ ಆಚರಣೆಗಳಿಂದ ರಂಗಭೂಮಿ ಜನ್ಮ ತಾಳಿದೆ ಎನ್ನಬಹುದು. ಒಟ್ಟಿನಲ್ಲಿ ಯಾವುದೇ ದೇಶದ ರಂಗಭೂಮಿ ಅಲ್ಲಿನ ಧಾರ್ಮಿಕ ನಂಬಿಕೆಯ ಹಿನ್ನೆಲೆಯಲ್ಲಿ ಬೆಳೆದು ಬಂದಿದೆ ಎಂಬುವುದು ಸತ್ಯವಾದ ಮಾತು. ನೃತ್ಯ, ಸಂಗೀತ, ಶಿಲ್ಪ ಮುಂತಾದ ಸಾಂಸ್ಕೃತಿಕ ಕಲೆಗಳು ನಾಟಕದ ಪ್ರಮುಖವಾದ ಅಂಗಗಳಾಗಿವೆ. ಕನ್ನಡ ರಂಗಭೂಮಿಯು ಕರ್ನಾಟಕದ ಸಾಂಸ್ಕೃತಿಕ ಪರಂಪರೆಯ ಪ್ರಮುಖ ಅಂಗವಾಗಿದೆ. ಜಾನಪದ ರಂಗರೂಪಗಳಿಂದ ಆರಂಭಗೊಂಡು ಆಧುನಿಕ ಪ್ರಯೋಗಾತ್ಮಕ ನಾಟಕಗಳವರೆಗೆ ಕನ್ನಡ ರಂಗಭೂಮಿ ನಿರಂತರವಾಗಿ ಬೆಳವಣಿಗೆಯನ್ನು ಕಂಡಿದೆ. ಸಮಾಜದ ರಾಜಕೀಯ, ಆರ್ಥಿಕ, ಸಾಂಸ್ಕೃತಿಕ ಹಾಗೂ ನೈತಿಕ ಬದಲಾವಣೆಗಳನ್ನು ಪ್ರತಿಬಿಂಬಿಸುವ ಮಾಧ್ಯಮವಾಗಿ ಇದು ಕಾರ್ಯನಿರ್ವಹಿಸಿದೆ. ಈ ಲೇಖನದಲ್ಲಿ ಕನ್ನಡ ರಂಗಭೂಮಿಯ ಐತಿಹಾಸಿಕ ಹಿನ್ನೆಲೆ, ಬೆಳವಣಿಗೆ, ಪ್ರಮುಖ ನಾಟಕಕಾರರು, ಸಾಮಾಜಿಕ ಕೊಡುಗೆ, ಪ್ರಸ್ತುತ ಸ್ಥಿತಿ, ಎದುರಿಸುತ್ತಿರುವ ಸವಾಲುಗಳು ಹಾಗೂ ಭವಿಷ್ಯದ ಸಾಧ್ಯತೆಗಳನ್ನು ವಿಶ್ಲೇಷಿಸಲಾಗಿದೆ. ರಂಗಭೂಮಿಯು ಕೇವಲ ಮನರಂಜನೆಯ ಮಾಧ್ಯಮವಲ್ಲ; ಅದು ಸಮಾಜದ ಕನ್ನಡಿಯಾಗಿದೆ. ಜನರ ಭಾವನೆಗಳು, ಬದುಕಿನ ಮೌಲ್ಯಗಳು, ರಾಜಕೀಯ ಬೆಳವಣಿಗೆಗಳು ಹಾಗೂ ಸಾಮಾಜಿಕ ಸಮಸ್ಯೆಗಳನ್ನು ನಾಟಕದ ಮೂಲಕ ಜನರಿಗೆ ತಲುಪಿಸುವ ಶಕ್ತಿಯುತ ಕಲಾ ಪ್ರಕಾರವಾಗಿದೆ. ಕನ್ನಡ ರಂಗಭೂಮಿಯ ಇತಿಹಾಸವು ಸಾವಿರಾರು ವರ್ಷಗಳ ಸಾಂಸ್ಕೃತಿಕ ಪರಂಪರೆಯೊಂದಿಗೆ ಬೆಸೆದುಕೊಂಡಿದೆ. ಜಾನಪದ ಕಲೆಗಳಿಂದ ಆರಂಭಗೊಂಡ ಈ ಪಯಣವು ಇಂದಿನ ಆಧುನಿಕ ರಂಗಭೂಮಿಯವರೆಗೆ ವಿಸ್ತರಿಸಿದೆ. ಕರ್ನಾಟಕದಲ್ಲಿ ರಂಗಭೂಮಿಯ ಬೇರುಗಳು ಜಾನಪದ ಕಲಾ ಸಂಪ್ರದಾಯಗಳಲ್ಲಿ ಕಂಡುಬರುತ್ತವೆ. ಯಕ್ಷಗಾನ, ತಾಳಮದ್ದಲೆ, ಗೊಂಬೆಯಾಟ, ಡೊಳ್ಳು ಕುಣಿತ, ವೀರಗಾಸೆ ಮೊದಲಾದ ಕಲಾರೂಪಗಳು ಕನ್ನಡ ರಂಗಭೂಮಿಯ ಮೂಲಾಧಾರಗಳಾಗಿವೆ. ಕನ್ನಡ ನಾಡಿನಲ್ಲಿ ಹಿಂದಿನಿಂದಲೂ ವಿಶಿಷ್ಟವಾಗಿ ಪ್ರಚಾರದಲ್ಲಿರುವ ತಾಳಮದ್ದಲೆ, ಗೊಂದಲಿಗರ ಪ್ರಸಂಗಗಳು,

* **ಡಾ. ಶಿವಾನಂದ ಎಂ. ಹಂಚಿನಾಳ,** ಪ್ರಾಧ್ಯಾಪಕರು ಹಾಗೂ ಮುಖ್ಯಸ್ಥರು, ಕನ್ನಡ ವಿಭಾಗ, ನ್ಯೂ ಹಾರಿಜನ್ ಕಾಲೇಜು, ಕಸ್ತೂರಿ ನಗರ, ಬೆಂಗಳೂರು.

ಕಂಸಾಳೆ ಅಂತಹ ಕಲಾ ರೂಪಗಳನ್ನು ಇಲ್ಲಿ ನೆನಪಿಸಿಕೊಳ್ಳಬಹುದು. ಪೌರಾಣಿಕ ಕಥಾ ಪ್ರಸಂಗಗಳನ್ನು ಹಬ್ಬ ಹರಿದಿನಗಳಲ್ಲಿ, ಜಾತ್ರೆ ಉತ್ಸವಗಳಲ್ಲಿ ಇಂದಿಗೂ ನಮ್ಮ ಜನಪದರು ಆರಾಧಿಸುವ ಸಂಭ್ರಮಾಚರಣೆಯಲ್ಲಿ ಭಾಗಿಯಾಗುವ ಪ್ರಸಂಗಗಳನ್ನು ನಾವು ಕಾಣಬಹುದಾಗಿದೆ. ಇವುಗಳು ಕೇವಲ ಕಥನ ಕಲೆಗಳಾಗಿರದೆ ಪ್ರದರ್ಶನ ಕಲೆಗಳಾದ ಈ ಬಗೆಯ ತಂತ್ರ ಕಲಾ ರೂಪಗಳಿಂದ ಪ್ರಾಚೀನ ಕನ್ನಡ ರಂಗಭೂಮಿ ಪ್ರೇರಣೆ, ಪುಷ್ಟಿಯನ್ನು ಹೊಂದಿದೆ. ರಂಗಭೂಮಿ ಹಲವು ಕಲೆಗಳ ಸಂಗಮ – ನೃತ್ಯ, ಸಂಗೀತ, ಸಾಹಿತ್ಯ, ಅಭಿನಯಗಳು ಮೇಳೈಸಿದ ದೃಶ್ಯ ಕಾವ್ಯ. ಕಾಳಿದಾಸನು ಹೇಳುವಂತೆ "ಕಾವ್ಯೇಷು ನಾಟಕಂ ರಮ್ಯಂ" ಎಂಬ ಮಾತು ಗಮನಿಸಬಹುದು. ಮನರಂಜನೆ, ಜ್ಞಾನ ನೀಡುವುದು ರಂಗಭೂಮಿಯ ಪ್ರಯೋಜನಗಳಾಗಿವೆ. ಜಗತ್ತಿನ ಅತ್ಯಂತ ಪ್ರಾಚೀನ ಕಲೆಗಳಲ್ಲಿ ನಾಟಕ ಒಂದಾಗಿದೆ. ಈ ನಾಟಕಕ್ಕೆ ತನ್ನದೇ ಆದ ಪರಂಪರೆಯಿದೆ, ಇದನ್ನೇ ವಿಶಾಲಾರ್ಥದಲ್ಲಿ ರಂಗ ಪ್ರಪಂಚ ಅಥವಾ ರಂಗಭೂಮಿ ಎಂದು ಕರೆಯಲಾಗುತ್ತದೆ.

**KEYWORDS:** ಕನ್ನಡ ರಂಗಭೂಮಿ, ಜಾನಪದ ಕಲೆ, ಯಕ್ಷಗಾನ, ನಾಟಕ, ಸಂಸ್ಕೃತಿ, ಸಾಮಾಜಿಕ ಜಾಗೃತಿ, ಅಭಿಜಾತ.

---

**ಕನ್ನಡ ರಂಗಭೂಮಿಯ ಪರಂಪರೆಯನ್ನು ಅರಿಯಬೇಕಾದರೆ, ಈ ಕೆಳಗಿನ ಅಂಶಗಳ ಆಧಾರದಿಂದ ಅವಲೋಕಿಸಬಹುದಾಗಿದೆ:**

**ಜಾನಪದ ರಂಗಭೂಮಿ:** ಜಾನಪದ ರಂಗಭೂಮಿ ಶಿಷ್ಟ ರಂಗಭೂಮಿಗಿಂತ ಹಳೆಯದು. ಆದರೆ ಜನಪದ ನಾಟಕಗಳ ಕಾಲವನ್ನು ಗುರುತಿಸುವುದಾಗಲಿ, ನಿರ್ಧರಿಸುವುದಾಗಲಿ ಕಷ್ಟ. ಅದು ಅತ್ಯಂತ ಪ್ರಾಚೀನವಾದದ್ದು ಎಂದಷ್ಟೇ ಹೇಳಬಹುದು. ಜಾನಪದ ರಂಗಭೂಮಿ ವಿಕಾಸಗೊಂಡದ್ದು ಕುಣಿತ, ನೃತ್ಯ, ಗೊಂಬೆಯಾಟ, ದೊಡ್ಡಾಟ, ಬಯಲಾಟ ಮುಂತಾದವುಗಳ ಮೂಲಕ. ಜಾನಪದ ರಂಗಭೂಮಿಯಿಂದ ಕನ್ನಡ ರಂಗಭೂಮಿಯ ಪ್ರಾಚೀನತೆಯನ್ನು ಸ್ಪಷ್ಟವಾಗಿ ಗುರುತಿಸದಿದ್ದರೂ ಸಹ ಅದು ಶಿಷ್ಟ ರಂಗಭೂಮಿಗಿಂತ ತುಂಬಾ ಹಳೆಯದೆಂದು ಹೇಳಬಹುದು. ಜಾನಪದ ಕಲೆಗಳು ಕನ್ನಡ ರಂಗಭೂಮಿ ವಿಕಾಸಕ್ಕೆ ಪ್ರೇರಣೆಯನ್ನು ನೀಡಿವೆ. ಅವುಗಳೆಂದರೆ ಮೈಸೂರು ಭಾಗದಲ್ಲಿನ ಮಾರಮ್ಮನ ಕುಣಿತ, ವೇಷಗಾರರು ಇವರೆಲ್ಲರೂ ಬಯಲು ರಂಗಭೂಮಿಯ ಕಲಾವಿದರು. ಇವರಂತೆ ಉತ್ತರ ಕರ್ನಾಟಕದ ಎಲ್ಲಮ್ಮನ ಕುಣಿತ, ದಕ್ಷಿಣ ಕನ್ನಡ ಜಿಲ್ಲೆಯ ಭೂತಾರಾಧನೆ, ಕೋಲುಬಸವನ ಆಟ, ಪಗರಣ ಇತ್ಯಾದಿಗಳು.

**ಅಭಿಜಾತ ರಂಗಭೂಮಿ:** ಅಭಿಜಾತ ನಾಟಕ ಸಾಹಿತ್ಯ ಬೆಳೆದು ಬಂದಿದ್ದು ಸಂಸ್ಕೃತದಲ್ಲಿ ಮಾತ್ರ. ಕನ್ನಡದಲ್ಲಿ ನಮಗೆ ದೊರೆಯುವುದು ತುಂಬಾ ವಿರಳ. ಕನ್ನಡ ನಾಟಕ ಪರಂಪರೆಯಲ್ಲಿ ಪ್ರಾಚೀನ ಕನ್ನಡ ಕವಿಗಳು ನಾಟಕಗಳನ್ನು ರಚಿಸುವ ಗೋಜಿಗೆ ಹೋಗಿಲ್ಲವೆಂಬ ವಿಷಯವು ನಮ್ಮ ಗಮನಕ್ಕೆ ಬಂದಿದ್ದರೂ, ಇಮ್ಮಡಿ ಪುಲಕೇಶಿಯ ಸೊಸೆ ಚಂದ್ರಾದಿತ್ಯನ ಪತ್ನಿಯಾದ ಬಿಜ್ಜಳ ರಾಣಿ ವಿಜಯ ಮಹಾದೇವಿ (ಕ್ರಿ.ಶ 650 ರಿಂದ 659 ರಲ್ಲಿ) "ಕೌಮುದೀ ಮಹೋತ್ಸವ" ಎಂಬ ನಾಟಕವನ್ನು ಬರೆದಿರುವುದು ಒಂದು ಅಪವಾದವಾಗಿ ಕಂಡುಬಂದಿದೆ. ಆದರೆ ಅದು ರಚಿತಗೊಂಡಿರುವುದು ಸಂಸ್ಕೃತದಲ್ಲಿ. ಕನ್ನಡದಲ್ಲಿ ಪ್ರಥಮ ಅಭಿಜಾತ

ನಾಟಕವೆನಿಸಿಕೊಂಡ "ಮಿತ್ರವಿಂದಾ ಗೋವಿಂದಾ" ಇದು ಸಹ ಸಂಸ್ಕೃತದ ರತ್ನಾವಳಿ ನಾಟಕದ ರೂಪಾಂತರ. ಇಂಥ ಹಿನ್ನೆಲೆಯಲ್ಲಿ ಪ್ರಾಚೀನ ಕಾಲದ ಕರ್ನಾಟಕ ನಾಟಕ ಶಾಲೆಗಳ ಬಗೆಗೆ ವಿವರಗಳಾಗಲಿ, ಅವುಗಳ ಅವಶೇಷಗಳಾಗಲಿ ಸಂಶೋಧಕರಿಗೆ ದೊರಕಿಲ್ಲ. ಆದುದರಿಂದ ಕನ್ನಡದಲ್ಲಿ ಅಭಿಜಾತ ನಾಟಕಗಳಾಗಲಿ ಅಥವಾ ರಂಗಭೂಮಿಯಾಗಲಿ ಇತ್ತು ಎಂದು ಹೇಳಲು ಆಗುವುದಿಲ್ಲ.

**ಶಾಸನಗಳ ಮಾಹಿತಿ:** ಶಾಸನಗಳ ಅಧ್ಯಯನದಲ್ಲಿ ನಮಗೆ ಮೊದಮೊದಲು ದೇಶಿಯ ನಾಟಕ ಪದ್ಧತಿಯ ಬಗೆಗೆ ಮಾಹಿತಿ ದೊರಕುವುದು (ಕ್ರಿ.ಶ 550ರ) ಪುನ್ನಾಟ ಪೃಥ್ವಿಪತಿಯ ಕಾಲದ ಶಾಸನಗಳಲ್ಲಿ. ರಾಷ್ಟ್ರದ ಜನ ಆವಾಹನ, ವಿವಾಹ, ಜಾತ್ರೆ ಮುಂತಾದ ಉತ್ಸವಗಳಲ್ಲಿ ನಟರ ಮತ್ತು ನರ್ತಕಿಯರ ಅಭಿನಯವನ್ನು ನೋಡಿ ಮನರಂಜನೆಯನ್ನು ಪಡುತ್ತಿದ್ದರು ಎಂದು ಹೇಳಿದೆ.

ಪಲ್ಲವರ ಒಂದನೆಯ ಮಹೇಂದ್ರವರ್ಮನು (ಕ್ರಿ.ಶ–7ನೇ ಶತಮಾನ) ಗಂಧರ್ವ ಶಾಸ್ತ್ರದಲ್ಲಿ ಪಾರಂಗತನಾಗಿದ್ದು 'ಮತ್ತ ವಿಲಾಸ ಪ್ರಹಸನ'ವನ್ನು ರಚಿಸಿದ. ಈ ಪ್ರಹಸನವು ತಿರುವಾಂಕೂರಿನ ಸಂಸ್ಕೃತ ಗ್ರಂಥ ಮಾಲಿಕೆಯಲ್ಲಿ ಐದನೆಯ ಸಂಪುಟವಾಗಿ ಪ್ರಕಟವಾಗಿದೆ. ಎಂಟನೇ ಶತಮಾನದ ಪಟ್ಟದಕಲ್ಲು ಬಳಿಯ ಕೆಲವು ಶಾಸನಗಳು ದೇಶೀಯ ನಾಟಕ ಪದ್ಧತಿಯಲ್ಲಿ ಪ್ರಸಿದ್ಧರಾದ ನಟಸೇವ್ಯ ದೇವಯ್ಯಗಳ ಮಗ ಅಚಲನ್ – ದುಗ್ಗಮಾರ ಇವರನ್ನು ಹೆಸರಿಸಿವೆ.

ಚಾಲುಕ್ಯ 6ನೆಯ ವಿಕ್ರಮಾದಿತ್ಯನ (ಕ್ರಿ.ಶ. 1076 – 1127) ಹಿರಿಯ ಅರಸಿ ಅಭಿನವ ಸರಸ್ವತಿ ಕೇತಳದೇವಿ ನೃತ್ಯ ಗೀತೆಗಳಿಗೆ ಪ್ರವೀಣೆಯಾಗಿದ್ದಳು. ಚೋಳರು ಆಳಿದ ಕರ್ನಾಟಕದ ಕೆಲವು ಭಾಗಗಳಲ್ಲಿ ಸಿಗುವ ಶಾಸನಗಳ ಉಲ್ಲೇಖಗಳು ದೇಶಿಯ ನಾಟಕಗಳಿಗೆ ಸಂಬಂಧಪಟ್ಟ ಹಾಗೆ ಇವೆ. ಅಲ್ಲದೆ ಸಾಮಾನ್ಯವಾಗಿ ದೇವದಾಸಿಯರು ದೇವಾಲಯಗಳಲ್ಲಿ ಅಭಿನಯಿಸುತ್ತಿದ್ದರು. ಇವು ಪಟ್ಟದಕಲ್ಲು ಶಾಸನದಿಂದ ತಿಳಿದುಬರುವ ಸಂಗತಿಯಾಗಿವೆ. ವಿವಿಧ ನಾಟಕ ಪ್ರದರ್ಶಿಸುವ ವಿನೋದಗಳನ್ನು ನಾಟಕ ಶಾಲೆ, ದೇಶಿಯ ನಾಟಕಗಳ ನಟರನ್ನು ದೀನ ನಟರು, ನಟ–ಗಾಯಕ, ದೀನ ಜನ ಎಂದು 12ನೇ ಶತಮಾನದ ಹೊತ್ತಿಗೆ ಕರೆಯಲಾಗುತ್ತಿತ್ತು. ದೀನ ಜನ ಎಂದರೆ ಕೀಳು ವರ್ಗದವರು ಎಂದಾಗುತ್ತದೆ. ವಿಷ್ಣುವರ್ಧನನ (ಕ್ರಿ.ಶ. 1111 ರಿಂದ 1141) ಪಟ್ಟದ ರಾಣಿ ಶಾಂತಲಾ ದೇವಿ "ಗೀತ ವಾದ್ಯ ನೃತ್ಯ ಸೂತ್ರಧಾರಿ" ಯಾಗಿ ಪ್ರಖ್ಯಾತಿಯಾಗಿದ್ದಳು. ಖ್ಯಾತ ಇತಿಹಾಸಕಾರರಾದ ಭಾಸ್ಕರ ಆನಂದ ಸಾಲೆತೊರೆ ಅವರು ಶಾಸನಗಳ ಆಧಾರದ ಮೇಲೆ (ಕ್ರಿ.ಶ 1225 ರ ಹೊತ್ತಿಗೆ) ಕರ್ನಾಟಕದಲ್ಲಿ ರಂಗಭೂಮಿ ನಿರ್ದಿಷ್ಟ ಸ್ಥಾನವನ್ನು ಸ್ಥಾಪಿಸಿಕೊಂಡಿತೆಂದು ತಿಳಿಸುತ್ತಾರೆ. ಕರ್ನಾಟಕದ ಶಾಸನಗಳನ್ನು ಅವಲೋಕಿಸಿದಾಗ (ಕ್ರಿ.ಶ 550 ರಿಂದ 1654ರ ವರೆಗೆ) ಅಂದರೆ 16ನೇ ಶತಮಾನದ ಮಧ್ಯಭಾಗದಿಂದ 17ನೇ ಶತಮಾನದ ಮಧ್ಯಭಾಗದವರೆಗೆ ನಾಟಕ ಕಲೆ ದೇಶಿಯ ರೂಪದಲ್ಲಿ ಇದ್ದುದ್ದು ವ್ಯಕ್ತವಾಗುತ್ತದೆ. ಶಾಸನಗಳ ಮಾಹಿತಿಗಳು ಕಾಲಮಾನದ ದೃಷ್ಟಿಯಲ್ಲಿ ಬಿಡಿಬಿಡಿಯಾಗಿ ಅಲ್ಲಲ್ಲಿ ದೊರೆಯುತ್ತವಾದರೂ ಕರ್ನಾಟಕದಲ್ಲಿ ಕರ್ನಾಟಕ ನಾಟಕ ಕಲೆ, ಅವಿಚ್ಛಿನ್ನವಾಗಿ ಆರನೇ ಶತಮಾನದಿಂದ ಸಾಗಿ ಬಂದಿರುವ ಕಥೆಯನ್ನು ಹೇಳುತ್ತವೆ.

**ಸಾಹಿತ್ಯಿಕ ಆಧಾರಗಳು:** ಕರ್ನಾಟಕದಲ್ಲಿ ಸಂಸ್ಕೃತ ಮತ್ತು ಪ್ರಾಕೃತಗಳು ಪ್ರಚಲಿತವಾಗಿದ್ದ ಕಾಲದಿಂದ ಕನ್ನಡ ವಿಕಾಸದ ವಿವಿಧ ಹಂತಗಳಲ್ಲಿ ಯಕ್ಷಗಾನ, ಬಯಲಾಟ ಅಸ್ತಿತ್ವದಲ್ಲಿ ಇರುವುದನ್ನು ಸಾಹಿತ್ಯಿಕ ಕೃತಿಗಳ ಆಧಾರದಿಂದ ಅರಿಯಬಹುದಾಗಿದೆ. ಕ್ರಿಸ್ತಶಕ

ಎರಡನೆಯ ಶತಮಾನದಷ್ಟು ಹಳೆಯ ತಮಿಳು ಸಾಹಿತ್ಯದಲ್ಲಿ ಸಹ ಕನ್ನಡ ದೇಶಿ ಅಭಿನಯ ಕಲೆಯ ಬಗ್ಗೆ ಉಲ್ಲೇಖಗಳಿವೆ. ಕ್ರಿಸ್ತಶಕೆಯ ಪ್ರಾರಂಭದ ವರ್ಷಗಳಲ್ಲಿ ರಚನೆಗೊಂಡ "ಶಿಲಪ್ಪದಿಗಾರಂ" ತಮಿಳು ಕೃತಿಯಲ್ಲಿ ಕನ್ನಡ ನಟಿಯರ ಹಾಗೂ ನೃತ್ಯಗಾರ್ತಿಯರ ಬಗ್ಗೆ ವಿವರಗಳಿವೆ.

ಕರ್ನಾಟಕದ ಭಾಗವಾಗಿದ್ದ ನೀಲಗಿರಿಗೆ ಚೇರ (ಕೇರಳದ) ರಾಜನು ಬಂದಾಗ ಕನ್ನಡ ನಟಿಯರು ಹಾಗೂ ನರ್ತಕಿಯರು ವೇಷ–ಭೂಷಣಗಳಿಂದ ಅಲಂಕೃತರಾಗಿ ನೃತ್ಯ–ಸಂಗೀತಗಳೊಡನೆ ಅರಸನಿಗೆ ಮನರಂಜನೆ ನೀಡಿದರೆಂದು ಹೇಳಲಾಗಿದೆ. ಕವಿರಾಜಮಾರ್ಗದಲ್ಲಿ ನೃಪತುಂಗನು ತನ್ನ ಕಾಲದಲ್ಲಿ ದೇಶಿಯ ನಾಟಕಗಳಿದ್ದುದ್ದನ್ನು ತಿಳಿಸಿ, ಅದನ್ನು 'ನಾಳ್ಪಗರಣ' ಎಂದಿದ್ದಾನೆ. ಅಲ್ಲದೆ ಕನ್ನಡದ ಖ್ಯಾತ ಕವಿಗಳು ತಮ್ಮ ಕೃತಿಯಲ್ಲಿ ನಾಟಕದ ಬಗೆಗೆ ಅಲ್ಲಲ್ಲಿ ಪ್ರಸ್ತಾಪಿಸಿದ್ದಾರೆ. 15ನೆಯ ಶತಮಾನದಲ್ಲಿ ಕುಮಾರವ್ಯಾಸನು ನಾಡಾಡಿಗಳ ನಾಟಕ ಎಂದರೆ, ಹರಿಹರ ಮತ್ತು ಮಧುರ ಕವಿಗಳು ದೇಶಿಯ ನಾಟಕಗಳನ್ನು 'ಬೀದಿಯ ಪಾಡು ಹಾಗೆ ಬೀರನ ಕಥೆ' ಎಂದಿದ್ದಾರೆ. ವಡ್ಡಾರಾಧನೆಯಲ್ಲಿ ಪಗರಣ ಅಥವಾ ಪಗರಣದಾಟ ಎಂದರೆ ವೇಷಧರಿಸಿ ಆಡುವ ಒಂದು ವಿಧದ ಮನರಂಜನೆಯ ನಾಟಕ, ಬಯಲಾಟ ಅಥವಾ ಹಾಸ್ಯಮಯ ರಂಗಪ್ರಯೋಗ ಎಂದರ್ಥ. ಅಂದರೆ ಹಗಲು ವೇಷದ ಹಾಸ್ಯಗಾರರೆಂದು ವರ್ಣಿಸಿದೆ. ಭರತೇಶ ವೈಭವದಲ್ಲಿ ರತ್ನಾಕರವರ್ಣಿ (16ನೇ ಶತಮಾನ) ದೇಶಿಯ ನಾಟಕವನ್ನು ಅಭಿನಯಿಸುವವರನ್ನು 'ಎಕ್ಕಡಿಗರು' ಎಂದು ಕರೆದಿದ್ದಾನೆ.

ಕುಮಾರವ್ಯಾಸನು ದೇಶಿಯ ನಾಟಕ ಶಾಲೆಯನ್ನು ನಾಟ್ಯಮಂದಿರ, ನಾಟ್ಯದ ಗರುಡಿ, ನಾಟ್ಯ ನಿಲಯ ಎಂದು ಕರೆದು, ನಾಟಕದಲ್ಲಿ ವೇಷಧರಿಸುವ ಪದ್ಧತಿಯನ್ನು ನಾಟಕದ ಚೋಹ–ವೇಷ ಎಂದಿದ್ದಾನೆ.

16ನೇ ಶತಮಾನದ ಹೊತ್ತಿಗೆ ಕರ್ನಾಟಕದಲ್ಲಿ ದೇಶಿಯ ನಾಟಕಗಳು ಒಂದು ನಿರ್ದಿಷ್ಟ ರೂಪಕ್ಕೆ ಬಂದು, ವಿಜಯನಗರ ಸಾಮ್ರಾಟರಿಂದಲೂ ಮತ್ತು ಮೈಸೂರು ಅರಸರಿಂದಲೂ ನಾಟಕ ರಚನೆ ಹಾಗೂ ಅಭಿನಯಕ್ಕೆ ಪ್ರೋತ್ಸಾಹ ದೊರೆತ ಸಂಗತಿ ತಿಳಿಯಬಹುದಾಗಿದೆ. 19ನೆಯ ಶತಮಾನದ ಕೊನೆಯ ಹೊತ್ತಿಗೆ ಕರ್ನಾಟಕದಲ್ಲಿ ಸಾಂಪ್ರದಾಯಿಕ ಅಥವಾ ದೇಶಿಯ ನಾಟಕಗಳು ಹೀಗೆ ಉಚ್ಛ್ರಾಯ ಸ್ಥಿತಿಯನ್ನು ಮುಟ್ಟಿದಾಗ ವಿದೇಶಿ ಪ್ರಭಾವದಿಂದ ಹೊಸ ಮಾದರಿಯ ವೃತ್ತಿ ನಾಟಕಗಳು ಹುಟ್ಟಿಕೊಂಡವು.

**ಯಾತ್ರಿಕರ ದಾಖಲೆಗಳು:** ವಿಜಯನಗರ ಸಾಮ್ರಾಜ್ಯ ಕಾಲದಲ್ಲಿ ರಾಜಧಾನಿ ವಿಜಯನಗರಕ್ಕೆ ಭೇಟಿ ಕೊಟ್ಟ ವಿದೇಶಿ ಯಾತ್ರಿಕರು ತಾವು ನೋಡಿದ ದೇಶಿಯ ನಾಟಕ ಹಾಗೂ ನೃತ್ಯಗಳ ಬಗೆಗೆ ಮಾಹಿತಿಗಳನ್ನು ನೀಡಿದ್ದಾರೆ. ಅವರಲ್ಲಿ ಇತಿಹಾಸಕಾರ (ಕ್ರಿ.ಶ. 1570 ಫೆರಿಸ್ಟಾ) ಗುಲ್ಬರ್ಗ ರಾಜ್ಯದ ಸುಲ್ತಾನ್ ಫಿರೋಜಾನ ಗೂಢಚಾರರು ನಟರಂತೆ ವೇಷ ಧರಿಸಿ ವಿಜಯನಗರದ ಅರಸ ಇಮ್ಮಡಿ ಬುಕ್ಕನ (1339 – 1406) ಮಗನನ್ನು ತಂತ್ರದಿಂದ ಕೊಂದ ವಿಷಯವನ್ನು ತಿಳಿಸುತ್ತಾನೆ.

ಕ್ರಿಸ್ತಶಕ (1443) ರಲ್ಲಿ ವಿಜಯನಗರಕ್ಕೆ ಬಂದ ಅಬ್ದುಲ್ ರಜಾಕ್ ಎಂಬ ಪರ್ಷಿಯ ದೇಶದ ರಾಯಭಾರಿ ಮಹಾನವಮಿ ಉತ್ಸವದ ಕಾಲದಲ್ಲಿ ಗಣಿಕೆಯರು–ಜವನಿಕೆಯರು ಹಿಂದೆ ಯಕ್ಷಗಾನ ಶೈಲಿಯ ದೇಶಿಯ ನೃತ್ಯ ನಾಟಕವನ್ನು ಅಭಿನಯಿಸುತ್ತಿದ್ದುದನ್ನು ವರ್ಣಿಸಿದ್ದಾನೆ.

**ನಾಟ್ಯ ಶಾಸ್ತ್ರ ಹಾಗೂ ಸಂಸ್ಕೃತ ನಾಟಕಗಳ ಪ್ರಭಾವಗಳು:**

9ನೇ ಶತಮಾನದ ಪೂರ್ವಾರ್ಧದಲ್ಲಿ ಸಂಸ್ಕೃತ ಹಾಗೂ ಸ್ವಲ್ಪಮಟ್ಟಿನ ಪ್ರಾಕೃತ ಭಾಷೆಗಳು ಕರ್ನಾಟಕದಲ್ಲಿ ಪ್ರಚಲಿತವಾಗಿದ್ದವು. 10ನೆಯ ಶತಮಾನದ ಹೊತ್ತಿಗೆ ಸಂಸ್ಕೃತ ಕಾವ್ಯಗಳಲ್ಲಿ ಕೆಲವನ್ನು ಕನ್ನಡಕ್ಕೆ ಅಳವಡಿಸಲಾಯಿತು. ರನ್ನನ ಗದಾಯುದ್ಧ ಮತ್ತು ಬಾಣನ ಕೃತಿಯ ಆಧಾರದ ಮೇಲೆ ನಾಗವರ್ಮನು ಬರೆದ ಕಾದಂಬರಿ. ಪಂಪ, ರನ್ನಾದಿ ಕವಿಗಳು ಸಂಸ್ಕೃತ ಕಾವ್ಯದ ಪ್ರಭಾವದಿಂದ ತಮ್ಮ ಕಾವ್ಯಗಳನ್ನು ರಚಿಸಿದರು. ಭಾಸನ ಊರುಭಂಗ ಮತ್ತು ಸ್ವಪ್ನವಾಸವದತ್ತ, ಕಾಳಿದಾಸನ ವಿಕ್ರಮೋರ್ವಶೀಯ ಮತ್ತು ಶಾಕುಂತಲ, ಹರ್ಷನ ರತ್ನಾವಳಿ ಮತ್ತು ನಾಗಾನಂದ, ಭವಭೂತಿಯ ಮಾಲತೀ ಮಾಧವ, ಭಟ್ಟನಾರಾಯಣನ ವೇಣೀಸಂಹಾರ – ಈ ಕೆಲವು ಸಂಸ್ಕೃತ ನಾಟಕಗಳು ಕನ್ನಡ ಕವಿಗಳ ಆಲೋಚನೆಗೆ ಒಳಪಟ್ಟಿದ್ದವು ಎಂದು ವಿದ್ವಾಂಸರ ಅಭಿಪ್ರಾಯ.

ವಿಜಯನಗರದ ಅರಸರ ಕಾಲದಲ್ಲಿ ನಾಟಕಗಳ ರಚನೆಯ ಪ್ರಯತ್ನಗಳು ನಡೆದರೂ ಅವುಗಳು ಸಂಸ್ಕೃತದಲ್ಲಿದ್ದವು. ಅವುಗಳಲ್ಲಿ ಜ್ಯೋತಿರೇಶ್ವರ ಎಂಬ ಕವಿ ಎರಡು ಅಂಕಗಳಲ್ಲಿ ರಚಿಸಿದ "ಧೂರ್ತ ಸಮಾಗಮ" ಪ್ರಹಸನ, ಕೃಷ್ಣದೇವರಾಯನು ರಚಿಸಿದ ಜಾಂಬವತಿ ಕಲ್ಯಾಣ. ಮೈಸೂರು ಅರಸರ ಕಾಲದಲ್ಲಿ ಆಸ್ಥಾನ ಕವಿ ಸಿಂಗರಾಯ (1680) ಸಂಸ್ಕೃತದ ರತ್ನಾವಳಿ ನಾಟಕವನ್ನು ಕನ್ನಡಕ್ಕೆ ಪರಿವರ್ತಿಸಿ ಅದಕ್ಕೆ "ಮಿತ್ರವಿಂದಾ ಗೋವಿಂದಾ" ಎಂಬ ಹೆಸರನ್ನು ನೀಡಿದನು. ಇದು ಕನ್ನಡದ ಪ್ರಥಮ ನಾಟಕವಾಗಿದೆ. ಇದರ ನಂತರ ಸುಮಾರು ಎರಡು ಶತಮಾನಗಳ ಕಾಲ ನಾಟಕಗಳ ರಚನೆಯಾಗಲಿಲ್ಲ. 19ನೇ ಶತಮಾನದ ಕೊನೆಯಲ್ಲಿ ಪ್ರಾರಂಭವಾದ ನಾಟಕಗಳ ರಚನೆ, ಮೊದಲಿಗೆ ಚುರಮುರಿ ಶೇಷಗಿರಿರಾಯರು ಕಾಳಿದಾಸನ ಶಾಕುಂತಲ ನಾಟಕವನ್ನು ಕನ್ನಡಕ್ಕೆ ಅನುವಾದಿಸಿದರು. ತದನಂತರ ವಿದ್ವಾನ್ ಅಭಿನವ ಕಾಳಿದಾಸ ಬಸಪ್ಪ ಶಾಸ್ತ್ರಿಗಳು ಅನುವಾದಿಸಿದರು (ಕ್ರಮವಾಗಿ ಕ್ರಿ.ಶ. 1870–1883 ರಚನೆಗೊಂಡ ಕಾಲ).

**ವೃತ್ತಿ ರಂಗಭೂಮಿ:** ವೃತ್ತಿ ರಂಗಭೂಮಿಯು ಸಂಸ್ಕೃತ ನಾಟಕಗಳ ಭಾಷಾಂತರಗಳನ್ನು, ಅವುಗಳ ಪ್ರಭಾವದಿಂದ ಕನ್ನಡದಲ್ಲಿ ಸ್ವತಂತ್ರವಾಗಿ ರಚಿತವಾದ ನಾಟಕಗಳನ್ನು ಅಭಿನಯಿಸುತ್ತಿದ್ದವು. ಮರಾಠಿ ರಂಗಭೂಮಿ ಮತ್ತು ಪಾರ್ಸಿ ನಾಟಕ ಮಂಡಳಿಗಳ ಪ್ರಭಾವದಿಂದ ಕನ್ನಡದಲ್ಲಿ ವೃತ್ತಿ ರಂಗಭೂಮಿ ರೂಪ ತಾಳಿತು. ಉತ್ತರ ಕರ್ನಾಟಕದಲ್ಲಿ ಶಾಂತಕವಿಗಳ ಬೆಂಬಲದಿಂದ 1872ರಲ್ಲಿ ಶ್ರೀ ವೀರನಾರಾಯಣ ನಾಟಕ ಮಂಡಳಿ ಅಸ್ತಿತ್ವಕ್ಕೆ ಬಂದರೆ, ದಕ್ಷಿಣ ಕರ್ನಾಟಕದಲ್ಲಿ ಚಾಮರಾಜ ಒಡೆಯರ್ ಪಾರ್ಸಿ ಕಂಪನಿಗಳ ಮಾದರಿಯಲ್ಲಿ ಅರಮನೆಯ ನಾಟಕ ಮಂಡಳಿ ಸ್ಥಾಪಿಸಿದರು. ವೃತ್ತಿ ನಾಟಕಗಳಿಗಾಗಿ ಕನ್ನಡಕ್ಕೆ ಭಾಷಾಂತರಗೊಂಡ ಸಂಸ್ಕೃತ ನಾಟಕಗಳಲ್ಲಿ ಕೆಲವು ಪ್ರಮುಖವಾಗಿವೆ: 1) ಮಾಳವಿಕಾಗ್ನಿ ಮಿತ್ರ 2) ವಿಕ್ರಮೋರ್ವಶೀಯ 3) ಪ್ರಿಯದರ್ಶಿಕಾ 4) ಬಾಲಚರಿತ 5) ಸ್ವಪ್ನವಾಸವದತ್ತ 6) ಮುದ್ರಾರಾಕ್ಷಸ 7) ಮೃಚ್ಛಕಟಿಕ 8) ರತ್ನಾವಳಿ. ಇವುಗಳ ಮೂಲ ಕವಿ–ಅನುವಾದ ಕವಿಗಳ ಹೆಸರು ಹೀಗಿದೆ: 1) ಕಾಳಿದಾಸ – ಧೊಂಡೋ ನರಸಿಂಹ ಮುಳಬಾಗಿಲು ಅವರ ಕೃತಿ, 2) ಕಾಳಿದಾಸನ ಕೃತಿ – ಮೂರು ಜನ ಕವಿಗಳು ರಚಿಸಿದ್ದಾರೆ: ಬಸಪ್ಪ ಶಾಸ್ತ್ರಿ, ಸೂಸಲೆ ಅಯ್ಯ ಶಾಸ್ತ್ರಿಗಳು, ಸಿದ್ದಾಂತಿ ಶಿವಶಂಕರ ಶಾಸ್ತ್ರಿಗಳು, 3) ಹರ್ಷನ ಕೃತಿ – ಅನುವಾದ ನಂಜನಗೂಡು ಶ್ರೀಕಂಠ ಶಾಸ್ತ್ರಿಗಳು, 4) ಭಾಸನ ಕೃತಿ – ಪಾನ್ಯಂ ಸುಂದರ ಶಾಸ್ತ್ರಿ, 5) ಭಾಸನ ಕೃತಿ – ಎಂ.ಡಿ. ಅಳಸಿಂಗಾಚಾರ್ಯ, 6) ವಿಶಾಖದತ್ತ – ಮೋಟಗಾನಹಳ್ಳಿ ರಾಮಶೇಷ ಶಾಸ್ತ್ರಿ, 7) ಶೂದ್ರಕ – ನಂಜನಗೂಡು ಸುಬ್ಬ ಶಾಸ್ತ್ರಿ, 8) ಹರ್ಷ – ಬಸಪ್ಪ ಶಾಸ್ತ್ರಿ.

ಕ್ರಿ.ಶ. 1877 ರಿಂದ 1947 ರವರೆಗೆ ಸುಮಾರು 50ಕ್ಕೂ ಹೆಚ್ಚು ನಾಟಕ ಮಂಡಳಿಗಳು ಹುಟ್ಟಿದವು. ಈ ಸಂದರ್ಭದಲ್ಲಿ ರಂಗ ಪರಿಕರಗಳಲ್ಲಿ ಬದಲಾವಣೆಗಳಾದವು. ಹಾಸ್ಯ, ವಿಡಂಬನೆ, ಸಾಮಾಜಿಕ ಹೀಗೆ ಇತ್ಯಾದಿ. ಅಣ್ಣ–ತಮ್ಮ, ಸಂಪತ್ತಿಗೆ ಸವಾಲು, ಗೌಡರ ಗದ್ದಲ ಮುಂತಾದವು ಈ ಸಂದರ್ಭದಲ್ಲಿ ಹೆಚ್ಚು ಪ್ರಚಲಿತ ನಾಟಕಗಳಾದವು.

1954 ರಲ್ಲಿ ಸ್ಥಾಪನೆಯಾದ ಗುಬ್ಬಿ ವೀರಣ್ಣ ನಾಟಕ ಮಂಡಳಿ ವೃತ್ತಿ ರಂಗಭೂಮಿಯಲ್ಲಿ ಒಂದು ಮೈಲುಗಲ್ಲು ಎಂದು ಪರಿಗಣಿಸಬಹುದು. ವೀರಣ್ಣನವರು ವೃತ್ತಿ ರಂಗಭೂಮಿಗೆ ಮಹತ್ವದ ಸ್ಥಾನವನ್ನು ಕಲ್ಪಿಸಿದರು. ಇವುಗಳ ನಂತರ ಕನ್ನಡ ವೃತ್ತಿ ರಂಗಭೂಮಿಯಲ್ಲಿ ಹಲವಾರು ನಾಟಕ ಸಂಘಗಳು ಹುಟ್ಟಿ ಬೆಳೆದು, ತದನಂತರ ಆಧುನಿಕ ಚಲನಚಿತ್ರ ರಂಗಕ್ಕೆ ಎದುರಾಗಿ ಮಂಕಾಗಿವೆ. ಒಟ್ಟಿನಲ್ಲಿ ಕನ್ನಡ ರಂಗಭೂಮಿ ಶ್ರೀಮಂತಗೊಳ್ಳುವಲ್ಲಿ ವೃತ್ತಿ ರಂಗಭೂಮಿಯು ತನ್ನದೇ ಕೊಡುಗೆಯನ್ನು ನೀಡಿದೆ.

**ಹವ್ಯಾಸಿ ರಂಗಭೂಮಿ:** ವೃತ್ತಿ ರಂಗಭೂಮಿಯ ಸಂದರ್ಭದಲ್ಲಿಯೇ ಹವ್ಯಾಸಿ ರಂಗಭೂಮಿ ಉದಯಿಸಿತು. ಹವ್ಯಾಸಿಗಳು ಶ್ರೇಷ್ಠ ನಾಟಕ ಕೃತಿಗಳನ್ನು ರಂಗಭೂಮಿ ಮೂಲಕ ಪ್ರದರ್ಶಿಸಿದರು. ಹವ್ಯಾಸಿ ರಂಗಭೂಮಿಯವರು ನಾಟಕ ಸಾಹಿತ್ಯ, ವಸ್ತು, ವಿಚಾರಕ್ಕೆ ಹೆಚ್ಚು ಪ್ರಾಧಾನ್ಯತೆಯನ್ನು ನೀಡಿದರು. ರಂಗಸಜ್ಜಿಕೆಗೆ ಹೆಚ್ಚು ಮಹತ್ವ ನೀಡಲಿಲ್ಲ. ಸಾಮಾನ್ಯವಾಗಿ ವಿದ್ಯಾರ್ಥಿಗಳಿಂದ ನಾಟಕಗಳು ಪ್ರಯೋಗಗೊಳ್ಳುತ್ತಿದ್ದವು. ಇಲ್ಲಿ ಯಾವುದೇ ಆರ್ಥಿಕ ಲಾಭವಿರಲಿಲ್ಲ. ಕೇವಲ ಹವ್ಯಾಸಕ್ಕಾಗಿ ನಾಟಕಗಳು ಪ್ರಯೋಗವಾಗುತ್ತಿದ್ದವು. ಸಾಮಾಜಿಕವಾದ ಸಮಕಾಲೀನ ಕಥಾ ವಸ್ತುವಿಗೆ ಆದ್ಯತೆಯಿತ್ತು.

ಹವ್ಯಾಸಿ ರಂಗಭೂಮಿಯು ಉತ್ತರ ಕರ್ನಾಟಕದಲ್ಲಿ ಜನ್ಮ ತಾಳಿದ್ದು ಒಂದು ವಿಶೇಷ. ಕನ್ನಡ ರಂಗಭೂಮಿಯ ಬೆಳವಣಿಗೆಯಲ್ಲಿ ಅನೇಕ ನಾಟಕಕಾರರ ಕೊಡುಗೆ ಅಪಾರವಾಗಿದೆ. ಕುವೆಂಪು ಮಾನವತಾವಾದ ಮತ್ತು ಭಾರತೀಯ ಸಂಸ್ಕೃತಿಯ ಮೌಲ್ಯಗಳನ್ನು ನಾಟಕಗಳಲ್ಲಿ ಪ್ರತಿಪಾದಿಸಿದರು. ಟಿ.ಪಿ. ಕೈಲಾಸಂ ಹಾಸ್ಯ ಮತ್ತು ಸಾಮಾಜಿಕ ವಿಮರ್ಶೆಯನ್ನು ಸಂಯೋಜಿಸಿದ ನಾಟಕಗಳ ಮೂಲಕ ಹೊಸ ದಿಕ್ಕು ತೋರಿಸಿದರು. ಆದ್ಯ ರಂಗಾಚಾರ್ಯ (ಶ್ರೀರಂಗ) ಸಾಮಾಜಿಕ ಸಮಸ್ಯೆಗಳನ್ನು ನಾಟಕಗಳ ಮೂಲಕ ಪರಿಣಾಮಕಾರಿಯಾಗಿ ಚಿತ್ರಿಸಿದರು. ಚಂದ್ರಶೇಖರ್ ಕಂಬಾರರು ಜಾನಪದ ಸಂಸ್ಕೃತಿ ಮತ್ತು ಗ್ರಾಮೀಣ ಬದುಕಿನ ವೈಶಿಷ್ಟ್ಯವನ್ನು ನಾಟಕಗಳಲ್ಲಿ ಮೂಡಿಸಿದರು. ಗಿರೀಶ್ ಕಾರ್ನಾಡ್ ಪುರಾಣ ಮತ್ತು ಇತಿಹಾಸವನ್ನು ಆಧುನಿಕ ದೃಷ್ಟಿಕೋನದಿಂದ ಮರು ಸೃಷ್ಟಿಸಿದ ಪ್ರಮುಖ ನಾಟಕಕಾರರು. ಲಂಕೇಶ್, ಕಾರಂತರು, ಪ್ರಸನ್ನ, ಎಚ್.ಎಸ್. ಶಿವಪ್ರಕಾಶ್ ಹಾಗೂ ಅನೇಕ ಸಮಕಾಲೀನ ನಾಟಕಕಾರರ ಕೃತಿಗಳು ಕನ್ನಡ ರಂಗಭೂಮಿಯ ಬೆಳವಣಿಗೆಗೆ ಪ್ರೇರಣೆಯಾಗಿವೆ. ಕವಿ ಕಲಾವಿದರು, ಚಿತ್ರ ಕಲಾವಿದರು, ಸಮುದಾಯ ತಂಡ, ರಾಷ್ಟ್ರೀಯ ನಾಟಕ ಶಾಲೆ ಇನ್ನು ಮುಂತಾದ ಹವ್ಯಾಸಿ ಕಲಾವಿದರು ನಾಟಕಗಳನ್ನು ರಂಗ ಪ್ರಯೋಗಕ್ಕೆ ತಂದರು. ಇದೇ ಸಂದರ್ಭದಲ್ಲಿ ಬೀದಿ ನಾಟಕಗಳು ಪ್ರಚಲಿತಕ್ಕೆ ಬಂದವು. ಹೀಗೆ ಕನ್ನಡ ರಂಗಭೂಮಿಯ ಇತಿಹಾಸ ಚಿಕ್ಕದಾಗಿ ಕಂಡರೂ (ಅಲ್ಪಸಮಯದಲ್ಲಿ ಅಂದರೆ ಭಾರತೀಯ ರಂಗಭೂಮಿಗೆ ಹೋಲಿಸಿದರೆ ಕನ್ನಡ ರಂಗಭೂಮಿ 17ನೇ ಶತಮಾನದಲ್ಲಿ ಆರಂಭ) ವಿಸ್ತಾರವಾದ ರಂಗಭೂಮಿಯಾಗಿದೆ. ಇದೇ ಸಂದರ್ಭದಲ್ಲಿ ಅಂದರೆ 60–70ರ ದಶಕದಲ್ಲಿ ಬಹುತೇಕ ರಂಗಭೂಮಿಯ ಕಲಾವಿದರು ಸಿನಿಮಾ ಕ್ಷೇತ್ರಕ್ಕೆ ಪ್ರವೇಶ ಮಾಡುತ್ತಾರೆ. ಇದರಿಂದ ರಂಗಭೂಮಿ ಸಿನಿಮಾ ಕ್ಷೇತ್ರದ ಜೊತೆಗೆ ತೀವ್ರ ಸ್ಪರ್ಧೆಯನ್ನು ಎದುರಿಸಬೇಕಾಗುತ್ತದೆ. ಆದರೂ ಕೂಡ ರಂಗಭೂಮಿಯ ಕ್ರಿಯಾಶೀಲತೆ, ಜೀವಂತಿಕೆ ಕಡಿಮೆಯಾಗಿಲ್ಲ. ಇನ್ನು

ಹೊಸ–ಹೊಸ ರಂಗ ತಂಡಗಳು, ಹೊಸ ನಾಟಕಕಾರರು, ರಂಗಕರ್ಮಿಗಳು ಕ್ರಿಯಾಶೀಲರಾಗಿದ್ದಾರೆ. ರಂಗಭೂಮಿಯ ಹೊಸ ಇತಿಹಾಸ ಇನ್ನೂ ಬೆಳೆಯುತ್ತಲೇ ಇದೆ.

**ಪ್ರಸ್ತುತ ಸ್ಥಿತಿ (ಕನ್ನಡ ರಂಗಭೂಮಿ ಪರಂಪರೆಯ ಮುಂದುವರಿದ ಭಾಗ)**

**(ಕಳೆದ ಮೂರು–ನಾಲ್ಕು ದಶಕಗಳಿಂದ ಸಕ್ರಿಯವಾಗಿರುವ ಕನ್ನಡ ರಂಗಭೂಮಿ ತಂಡಗಳ ಪರಿಚಯ)**

ಕನ್ನಡ ರಂಗಭೂಮಿಯ ಬೆಳವಣಿಗೆಯಲ್ಲಿ ಅನೇಕ ರಂಗ ತಂಡಗಳು ನಿರಂತರವಾಗಿ ಕಾರ್ಯನಿರ್ವಹಿಸುತ್ತಿವೆ. ಇವು ನಾಟಕ ಪ್ರದರ್ಶನ, ಕಲಾವಿದರ ತರಬೇತಿ, ಸಾಮಾಜಿಕ ಜಾಗೃತಿ ಹಾಗೂ ಕನ್ನಡ ಸಂಸ್ಕೃತಿಯ ಉಳಿವಿಗೆ ಮಹತ್ವದ ಕೊಡುಗೆ ನೀಡಿವೆ. ಕಳೆದ ಮೂರು ದಶಕಗಳಲ್ಲಿ ಕನ್ನಡ ರಂಗಭೂಮಿಯು ಮಹತ್ವದ ಬದಲಾವಣೆಗಳನ್ನು ಕಂಡಿದೆ. ಜಾಗತೀಕರಣ, ತಂತ್ರಜ್ಞಾನದ ಬೆಳವಣಿಗೆ, ದೂರದರ್ಶನ, ಸಿನಿಮಾ ಮತ್ತು ಡಿಜಿಟಲ್ ಮಾಧ್ಯಮಗಳ ಪ್ರಭಾವದ ನಡುವೆಯೂ ಕನ್ನಡ ರಂಗಭೂಮಿ ತನ್ನ ವೈಶಿಷ್ಟ್ಯವನ್ನು ಉಳಿಸಿಕೊಂಡು ಹೊಸ ಪ್ರಯೋಗಗಳ ಮೂಲಕ ಪ್ರೇಕ್ಷಕರನ್ನು ಸೆಳೆಯುವ ಪ್ರಯತ್ನ ಮಾಡಿದೆ. ಈ ಅವಧಿಯಲ್ಲಿ ಹೊಸ ನಿರ್ದೇಶಕರು, ಹೊಸ ನಾಟಕಕಾರರು, ಯುವ ಕಲಾವಿದರು ಹಾಗೂ ವಿವಿಧ ರಂಗ ಸಂಸ್ಥೆಗಳು ಕನ್ನಡ ರಂಗಭೂಮಿಗೆ ಹೊಸ ಚೈತನ್ಯವನ್ನು ತುಂಬಿವೆ.

1. **ನೀನಾಸಂ (ಹೆಗ್ಗೋಡು):** 1949ರಲ್ಲಿ ಆರಂಭವಾದ ನೀನಾಸಂ ಕಳೆದ ಹಲವಾರು ವರ್ಷಗಳಿಂದಲೂ ಅತ್ಯಂತ ಸಕ್ರಿಯವಾಗಿ ಕಾರ್ಯನಿರ್ವಹಿಸುತ್ತಿದೆ. ನಾಟಕ ತರಬೇತಿ, ನೀನಾಸಂ ತಿರುಗಾಟ, ರಂಗೋಲಿ ಮತ್ತು ಸಾಂಸ್ಕೃತಿಕ ಶಿಕ್ಷಣದ ಮೂಲಕ ರಾಜ್ಯದಾದ್ಯಂತ ಸೇವೆ ಸಲ್ಲಿಸುತ್ತಿದೆ.
2. **ರಂಗಾಯಣ (ಮೈಸೂರು ಮತ್ತು ಇತರೆ ಕೇಂದ್ರಗಳು):** 1989 ರಲ್ಲಿ ಕರ್ನಾಟಕ ಸರ್ಕಾರ ಸ್ಥಾಪಿಸಿದ ರಂಗಾಯಣವು ಕಳೆದ ಹಲವು ವರ್ಷಗಳಿಂದ ನಿರಂತರವಾಗಿ ನಾಟಕ ನಿರ್ಮಾಣ, ಕಲಾವಿದರ ತರಬೇತಿ ಮತ್ತು ರಂಗೋತ್ಸವಗಳನ್ನು ಆಯೋಜಿಸುತ್ತಿದೆ. ಹವ್ಯಾಸಿ ರಂಗ ತಂಡಗಳಿಗೆ ವೇದಿಕೆ ಕಲ್ಪಿಸುವ ಕೆಲಸವನ್ನು ಮಾಡುತ್ತಿದೆ. ಈ ಒಂದು ರಂಗಸಂಸ್ಥೆಯಲ್ಲಿ ತರಬೇತಿ ಪಡೆದ ಹಲವಾರು ಕಲಾವಿದರು ಸಿನಿಮಾದಂತಹ ಮುಖ್ಯ ವಾಹಿನಿಯಲ್ಲಿ ಹೆಸರು ಮಾಡಿದ್ದಾರೆ.
3. **ಬೆನಕ (ಬೆಂಗಳೂರು):** 1974ರಲ್ಲಿ ಬಿ.ವಿ. ಕಾರಂತ್ ಅವರಿಂದ ಸ್ಥಾಪಿತವಾದ ಬೆನಕ, ಇಂದಿಗೂ ಸಕ್ರಿಯವಾಗಿ ಸಾಮಾಜಿಕ ಹಾಗೂ ಸಾಹಿತ್ಯ ಆಧಾರಿತ ಕನ್ನಡ ನಾಟಕಗಳನ್ನು ಪ್ರದರ್ಶಿಸುತ್ತಿದೆ. ದೇಶ–ವಿದೇಶಗಳಲ್ಲಿ ಪ್ರದರ್ಶನಗಳನ್ನು ನೀಡುತ್ತಾ ಕನ್ನಡ ರಂಗಭೂಮಿಯ ಬೆಳವಣಿಗೆಯನ್ನು, ಗೌರವವನ್ನು ಹೆಚ್ಚಿಸಿದೆ.
4. **ಸಮುದಾಯ:** ಸಮುದಾಯವು ಸಾಮಾಜಿಕ ಬದ್ಧತೆಯ ರಂಗ ತಂಡವಾಗಿದೆ. ಕಾರ್ಮಿಕರು, ರೈತರು, ಮಹಿಳೆಯರು ಮತ್ತು ಸಾಮಾನ್ಯ ಜನರ ಸಮಸ್ಯೆಗಳನ್ನು ನಾಟಕಗಳ ಮೂಲಕ ಅಭಿವ್ಯಕ್ತಿಸುವಲ್ಲಿ ಈ ತಂಡ ಪ್ರಸಿದ್ಧವಾಗಿದೆ. ಬೀದಿ ನಾಟಕಗಳು ಹಾಗೂ ಜನಜಾಗೃತಿ ಕಾರ್ಯಕ್ರಮಗಳ ಮೂಲಕ ವಿಶೇಷ ಗುರುತನ್ನು ಪಡೆದಿದೆ. ಇತ್ತೀಚಿನ ವರ್ಷಗಳಲ್ಲಿ ಸಕ್ರಿಯವಾಗಿದೆ.
5. **ರಂಗ ಸಂಪದ:** ಬೆಂಗಳೂರು ಕೇಂದ್ರವಾಗಿಸಿಕೊಂಡು ಕಾರ್ಯನಿರ್ವಹಿಸುವ ರಂಗ

ಸಂಪದವು ಕಳೆದ ಹಲವು ದಶಕಗಳಿಂದ ಗುಣಮಟ್ಟದ ಕನ್ನಡ ನಾಟಕಗಳನ್ನು ಪ್ರದರ್ಶಿಸುತ್ತಿದೆ. ಹೊಸ ನಾಟಕಕಾರರು ಹಾಗೂ ನಿರ್ದೇಶಕರಿಗೆ ಅವಕಾಶ ನೀಡುವಲ್ಲಿ ಈ ತಂಡದ ಪಾತ್ರ ಗಮನಾರ್ಹವಾಗಿದೆ.

6. **ನಟರಂಗ:** ನಟರಂಗವು ಸಾಮಾಜಿಕ, ಐತಿಹಾಸಿಕ ಹಾಗೂ ಸಾಹಿತ್ಯಾಧಾರಿತ ನಾಟಕಗಳನ್ನು ಪ್ರದರ್ಶಿಸುವ ಮೂಲಕ ಕನ್ನಡ ರಂಗಭೂಮಿಯಲ್ಲಿ ತನ್ನದೇ ಆದ ಸ್ಥಾನವನ್ನು ಗಳಿಸಿದೆ. ಅನೇಕ ರಂಗೋತ್ಸವಗಳಲ್ಲಿ ಭಾಗವಹಿಸಿ ಸಕ್ರಿಯವಾಗಿ ಕಾರ್ಯನಿರ್ವಹಿಸುತ್ತಿದೆ.
7. **ಕಲಾಗಂಗೋತ್ರಿ:** ಕಲಾಗಂಗೋತ್ರಿ ತಂಡವು ಪ್ರಯೋಗಾತ್ಮಕ ಹಾಗೂ ಸಾಮಾಜಿಕ ನಾಟಕಗಳ ಮೂಲಕ ಪ್ರಸಿದ್ಧಿಯಾಗಿದೆ. ಯುವ ಕಲಾವಿದರಿಗೆ ತರಬೇತಿ ನೀಡಿ ಹೊಸ ಪ್ರತಿಭೆಗಳನ್ನು ರಂಗಭೂಮಿಗೆ ಪರಿಚಯಿಸುವ ಕಾರ್ಯ ಮಾಡುತ್ತಿದೆ.
8. **ಸ್ಪಂದನ:** ಸ್ಪಂದನ ರಂಗತಂಡವು ಸಮಕಾಲೀನ ಸಮಸ್ಯೆಗಳು, ಮಾನವ ಸಂಬಂಧಗಳು ಹಾಗೂ ಸಾಮಾಜಿಕ ಮೌಲ್ಯಗಳ ಕುರಿತ ನಾಟಕಗಳನ್ನು ಪ್ರದರ್ಶಿಸುತ್ತಿದೆ. ಕಳೆದ ಹಲವು ವರ್ಷಗಳಿಂದ ಕನ್ನಡ ರಂಗಭೂಮಿಯಲ್ಲಿ ತನ್ನ ಸಕ್ರಿಯತೆಯನ್ನು ಉಳಿಸಿಕೊಂಡಿದೆ.
9. **ರಂಗಶಂಕರ:** ರಂಗಶಂಕರವು ಬೆಂಗಳೂರಿನ ಪ್ರಮುಖ ಕನ್ನಡ ರಂಗಭೂಮಿ ಕೇಂದ್ರವಾಗಿದೆ. ಇದನ್ನು ಪ್ರಸಿದ್ಧ ರಂಗಕರ್ಮಿ ಅರುಂಧತಿ ನಾಗ್ ಅವರು ತಮ್ಮ ಪತಿ, ಖ್ಯಾತ ನಟ ಹಾಗೂ ರಂಗಕರ್ಮಿ ಶಂಕರ್ ನಾಗ್ ಅವರ ಕನಸನ್ನು ನನಸಾಗಿಸಲು 2004ರಲ್ಲಿ ಬೆಂಗಳೂರಿನ ಜೆ.ಪಿ.ನಗರದಲ್ಲಿ ಸ್ಥಾಪಿಸಿದರು. ಇದರ ಉದ್ದೇಶ ಉತ್ತಮ ಗುಣಮಟ್ಟದ ನಾಟಕಗಳನ್ನು ಎಲ್ಲರಿಗೂ ತಲುಪಿಸುವುದು ಹಾಗೂ ರಂಗಭೂಮಿಯನ್ನು ಉತ್ತೇಜಿಸುವುದು ಮುಖ್ಯವಾಗಿದೆ. ಇದರ ವಿಶೇಷತೆ ಅಂದರೆ "ಒಂದು ದಿನ – ಒಂದು ನಾಟಕ" ಎಂಬ ಧ್ಯೇಯದೊಂದಿಗೆ ನಿರಂತರವಾಗಿ ನಾಟಕಗಳ ಪ್ರದರ್ಶನ ಮಾಡುವುದಾಗಿದೆ.
10. **ಡಿಜಿಟಲ್ ಯುಗದ ಕನ್ನಡ ರಂಗಭೂಮಿ (2016– 2026):** ಈ ಅವಧಿಯಲ್ಲಿ ಸಾಮಾಜಿಕ ಜಾಲತಾಣಗಳು ಮತ್ತು ಡಿಜಿಟಲ್ ವೇದಿಕೆಗಳ ಪ್ರಭಾವ ಹೆಚ್ಚಾಗಿತ್ತು. ವಿಶೇಷವಾಗಿ ಕೋವಿಡ್–19 ಅವಧಿಯಲ್ಲಿ ಅನೇಕ ನಾಟಕಗಳು ಆನ್‌ಲೈನ್ ಮೂಲಕ ಪ್ರದರ್ಶನಗೊಂಡವು. ನಂತರ ಮತ್ತೆ ನೇರ ಪ್ರದರ್ಶನಗಳು ಆರಂಭವಾಗಿ, ಟಿವಿ ವಾಹಿನಿಗಳಲ್ಲಿ ಮುಖ್ಯವಾಗಿ ಕಾಮಿಡಿ ಕಿಲಾಡಿಗಳು, ಗಿಚ್ಚಿ ಗಿಲಿ ಗಿಲಿ, ಡ್ರಾಮಾ ಜೂನಿಯರ್ಸ್, ಮಜಾ ಭಾರತದಂತಹ ಹೊಸ ರೂಪದ ರಂಗ ಚಟುವಟಿಕೆಗಳು ಪ್ರಯೋಗಗೊಂಡು ಪ್ರೇಕ್ಷಕರ ಬೆಂಬಲವನ್ನು ಗಳಿಸಿವೆ.
11. **ಕನ್ನಡ ರಂಗಭೂಮಿಯ ಸಾಮಾಜಿಕ ಪ್ರಭಾವ:** ಕನ್ನಡ ರಂಗಭೂಮಿಯು ಸಮಾಜದ ಮೇಲೆ ಮಹತ್ತರ ಪರಿಣಾಮ ಬೀರಿದೆ. ಮೂಢನಂಬಿಕೆ, ಅಸಮಾನತೆ, ಶೋಷಣೆ ಮತ್ತು ಅನ್ಯಾಯದ ವಿರುದ್ಧ ಜನರಲ್ಲಿ ಜಾಗೃತಿ ಮೂಡಿಸಿದೆ. ಮಹಿಳಾ ಶಿಕ್ಷಣ, ಸಮಾನತೆ ಮತ್ತು ಮಾನವ ಹಕ್ಕುಗಳ ಕುರಿತು ಅರಿವು ಹೆಚ್ಚಿಸಿದೆ. ಕನ್ನಡ ಭಾಷೆ ಮತ್ತು ಸಂಸ್ಕೃತಿ ಉಳಿವಿಗೆ ಮಹತ್ವದ ಕೊಡುಗೆ ನೀಡಿದೆ. ಯುವಜನರಲ್ಲಿ ಕಲೆಯ ಬಗ್ಗೆ ಆಸಕ್ತಿ ಮೂಡಿಸಲು ಸಹಕಾರಿಯಾಗಿದೆ.
12. **ಕನ್ನಡ ರಂಗಭೂಮಿ ಎದುರಿಸುತ್ತಿರುವ ಸವಾಲುಗಳು:** ಸಿನಿಮಾ, ದೂರದರ್ಶನ ಮತ್ತು (ಒಟಿಟಿ) ಮಾಧ್ಯಮಗಳ ಪ್ರಭಾವ. ಪ್ರೇಕ್ಷಕರ ಸಂಖ್ಯೆ ಕುಸಿಯುತ್ತಿರುವುದು. ಕಲಾವಿದರಿಗೆ

ಆರ್ಥಿಕ ಭದ್ರತೆಯ ಕೊರತೆ. ಗ್ರಾಮೀಣ ಪ್ರದೇಶಗಳಲ್ಲಿ ರಂಗಭೂಮಿಗೆ ಕಡಿಮೆ ಅವಕಾಶ. ಯುವ ಪೀಳಿಗೆಯಲ್ಲಿ ರಂಗಭೂಮಿಯತ್ತ ಆಸಕ್ತಿ ಕೊರತೆ.

13. **ಭವಿಷ್ಯದ ಸಾಧ್ಯತೆಗಳು:** ಶಾಲೆ ಮತ್ತು ಕಾಲೇಜುಗಳಲ್ಲಿ ರಂಗಭೂಮಿ ಶಿಕ್ಷಣಕ್ಕೆ ಹೆಚ್ಚಿನ ಆದ್ಯತೆ ನೀಡಬೇಕು. ಯುವ ಕಲಾವಿದರಿಗೆ ವಿದ್ಯಾರ್ಥಿವೇತನ ಮತ್ತು ತರಬೇತಿ ಒದಗಿಸಬೇಕು. ಜಾನಪದ ಹಾಗೂ ಆಧುನಿಕ ರಂಗಭೂಮಿಯ ಸಮನ್ವಯಕ್ಕೆ ಉತ್ತೇಜನ ನೀಡಬೇಕು. ಡಿಜಿಟಲ್ ವೇದಿಕೆಗಳಲ್ಲಿ ಕನ್ನಡ ನಾಟಕಗಳ ಪ್ರಸಾರವನ್ನು ಹೆಚ್ಚಿಸುವಂತೆ ನೋಡಿಕೊಳ್ಳಬೇಕು. ಸರ್ಕಾರ ಮತ್ತು ಖಾಸಗಿ ಸಂಸ್ಥೆಗಳು ರಂಗಭೂಮಿಗೆ ಹೆಚ್ಚಿನ ಆರ್ಥಿಕ ಹಾಗೂ ತಾಂತ್ರಿಕ ಬೆಂಬಲವನ್ನು ನೀಡಬೇಕು. ಅಂತರರಾಷ್ಟ್ರೀಯ ವೇದಿಕೆಗಳಲ್ಲಿ ಹಾಗೂ ರಂಗೋತ್ಸವಗಳಲ್ಲಿ ಕನ್ನಡ ನಾಟಕಗಳು ಅಧಿಕ ಸಂಖ್ಯೆಯಲ್ಲಿ ಪಾಲ್ಗೊಳ್ಳುವಂತೆ ನೋಡಿಕೊಳ್ಳಬೇಕು.

**ತೀರ್ಮಾನ:**

19ನೇ ಶತಮಾನದಲ್ಲಿ ವೃತ್ತಿಪರ ನಾಟಕ ಕಂಪನಿಗಳ ಉದಯದೊಂದಿಗೆ ಕನ್ನಡ ರಂಗಭೂಮಿಗೆ ಹೊಸ ಆಯಾಮ ದೊರೆಯಿತು. ನಂತರ ಸಾಮಾಜಿಕ, ಐತಿಹಾಸಿಕ ಮತ್ತು ಪೌರಾಣಿಕ ನಾಟಕಗಳು ಜನಪ್ರಿಯವಾದವು. ಕಳೆದ 30 ವರ್ಷಗಳಲ್ಲಿ ಕನ್ನಡ ರಂಗಭೂಮಿಯು ಅನೇಕ ಸವಾಲುಗಳನ್ನು ಎದುರಿಸಿದರೂ ತನ್ನ ಸೃಜನಶೀಲತೆ ಮತ್ತು ಸಾಂಸ್ಕೃತಿಕ ಮೌಲ್ಯಗಳನ್ನು ಉಳಿಸಿಕೊಂಡಿದೆ. ಪರಂಪರೆ ಮತ್ತು ಆಧುನಿಕತೆಯ ಸಮನ್ವಯದೊಂದಿಗೆ ಕನ್ನಡ ರಂಗಭೂಮಿ ಹೊಸ ದಿಕ್ಕಿನಲ್ಲಿ ಸಾಗುತ್ತಿದೆ. ಸರ್ಕಾರ, ಕಲಾವಿದರು, ಶಿಕ್ಷಣ ಸಂಸ್ಥೆಗಳು ಮತ್ತು ಪ್ರೇಕ್ಷಕರು ಒಗ್ಗೂಡಿ ಕಾರ್ಯನಿರ್ವಹಿಸಿದರೆ ಕನ್ನಡ ರಂಗಭೂಮಿಯ ಭವಿಷ್ಯ ಇನ್ನಷ್ಟು ಉಜ್ವಲವಾಗಲಿದೆ.

**ಪರಾಮರ್ಶನ ಗ್ರಂಥಗಳು:**

1. ಪುಟ್ಟಸ್ವಾಮಯ್ಯ ಬಿ., (1983), ಕನ್ನಡ ರಂಗಭೂಮಿ ನಡೆದು ಬಂದ ದಾರಿ, ಬೆಂಗಳೂರು: ಕನ್ನಡ ಮತ್ತು ಸಂಸ್ಕೃತಿ ಇಲಾಖೆ.
2. ವೆಂಕಟರಾಮ್ ಎನ್. ಎಸ್., (2012), ನವಕರ್ನಾಟಕ ಕೈಪಿಡಿ ರಂಗಭೂಮಿ, ಬೆಂಗಳೂರು: ನವ ಕರ್ನಾಟಕ ಪ್ರಕಾಶನ.
3. ರಂಗನಾಥ್ ಎಚ್. ಕೆ., (1970), ಕರ್ನಾಟಕ ರಂಗಭೂಮಿ, ಮೈಸೂರು: ಸುರುಚಿ ಪ್ರಕಾಶನ.
4. ಕೃಷ್ಣ ಶಾಸ್ತ್ರಿ ಎ. ಆರ್., (1988), ಸಂಸ್ಕೃತ ನಾಟಕ ಚರಿತ್ರೆ, ಮೈಸೂರು: ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾಲಯ.
5. ಚಕ್ಕೆರೆ ಶಿವಶಂಕರ್, (2008), ಕರ್ನಾಟಕ ಜನಪದ ರಂಗಭೂಮಿ, ಬೆಂಗಳೂರು: ಕರ್ನಾಟಕ ಜಾನಪದ ಪರಿಷತ್ತು.